ಕರ್ನಾಟಕ ಸರ್ಕಾರ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು

ಸಂಖ್ಯೆ. ಗಣಕಶಾಖೆ/ಎಸ್.ಎಸ್.ಎಲ್.ಸಿ/ಮೌಲ್ಯಮಾಪನ/01/2018-19 ದಿನಾಂಕ 29/11/2018

## -ಸುತ್ತೋಲೆ -

ವಿಷಯ : 2018-19 ನೇ ಸಾಲಿಗೆ ಪ್ರೌಢಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಮಾಹಿತಿಗಳನ್ನು ಮೌಲ್ಯಮಾಪನ ಕಾರ್ಯದ ಉದ್ದೇಶಕ್ಕಾಗಿ ಆನ್‌ಲೈನ್‌ನಲ್ಲಿ ಅಪ್‌ಡೇಟ್ ಮಾಡುವ ಬಗ್ಗೆ

ಉಲ್ಲೇಖ : ದಿನಾಂಕ 20/08/2018 ರಂದು ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿ

ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಮಾನ್ಯತೆ ಪಡೆದಿರುವ ಖಾಸಗಿ ಅನುದಾನಿತ ಹಾಗೂ ಅನುದಾನ ರಹಿತ ಶಾಲೆಗಳ ಮುಖ್ಯಸ್ಥರು ತಮ್ಮ ಶಾಲೆಯಲ್ಲಿನ ಶಿಕ್ಷಕರ ವಿವರಗಳನ್ನು ಏಪ್ರಿಲ್-2019ರ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಮೌಲ್ಯಮಾಪನ ಕಾರ್ಯ ನಿರ್ವಹಿಸುವ ಸಲುವಾಗಿ ಆನ್‌ಲೈನ್ ನಲ್ಲಿ ಅಪ್ ಡೇಟ್ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ.

ಮಂಡಳಿಯ ಜಾಲತಾಣದಲ್ಲಿ ಲಭ್ಯವಿರುವ ತಂತ್ರಾಶವನ್ನು ಬಳಸಿ ತಮ್ಮ ವ್ಯಾಪ್ತಿಯ ಎಲ್ಲ ಶಾಲೆಗಳ ಮುಖ್ಯಸ್ಥರು ಆಯಾ ಶಾಲೆಯ ಶಿಕ್ಷಕರ ವಿವರಗಳನ್ನು ಕಡ್ಡಾಯವಾಗಿ ದಿ. 15/12/2018 ಕ್ಕಿಂತ ಮುಂಚೆ ದಾಖಲಿಸುವಂತೆ ಸೂಚಿಸುವುದು.

- ಮಂಡಳಿಯ ಜಾಲತಾಣ www.kseeb.kar.nic.in ನಲ್ಲಿ ತಂತ್ರಾಂಶ ಲಭ್ಯವಿದೆ.
- ಪ್ರತಿ ಶಾಲೆಯ ಮುಖ್ಯಸ್ಥರು ಮಂಡಳಿಯ ಜಾಲತಾಣದ ಯೂಸರ್‌ನೇಮ್ ಹಾಗೂ ಪಾಸ್‌ವರ್ಡ್ ಬಳಸಿ ವಿವರಗಳನ್ನು ದಾಖಲಿಸುವುದು.
- ಪ್ರಥಮ ಬಾರಿಗೆ ಲಾಗ್‌ಇನ್ ಆಗಲು ತಮ್ಮ ಶಾಲೆಯ ಮಂಡಳಿಯ ಕೋಡ್‌ನ್ನು ಯೂಸರ್ ನೇಮ್ ಆಗಿ ಬಳಸುವುದು. ಉದಾಹರಣೆಗೆ IA0123 ಮಂಡಳಿಯ ಕೋಡ್ ಆಗಿದ್ದಲ್ಲಿ ಯೂಸರ್ ನೇಮ್ – IA0123 ಹಾಗು ಪಾಸ್‌ವರ್ಡ್– IA0123@123 ಆಗುತ್ತದೆ.
- ಪ್ರಥಮ ಲಾಗ್‌ಇನ್‌ನಲ್ಲಿ ಪಾಸ್‌ವರ್ಡ್‌ನ್ನು ಕಡ್ಡಾಯವಾಗಿ ಬದಲಿಸುವುದು. ಇದಕ್ಕಾಗಿ ಮುಖ್ಯಶಿಕ್ಷಕರ ಮೊಬೈಲ್‌ಗೆ ಬರುವ ಓ.ಟಿ.ಪಿ (one time password) ಬಳಸುವುದು.
- ಮುಖ್ಯಶಿಕ್ಷಕರನ್ನೂ ಒಳಗೊಂಡಂತೆ ಶಾಲೆಯ ಎಲ್ಲಾ ಶಿಕ್ಷಕರ ಮಾಹಿತಿಗಳನ್ನು ಕಡ್ಡಾಯವಾಗಿ ಭರ್ತಿ ಮಾಡುವುದು. ಅರ್ಹ ಶಿಕ್ಷಕರಿಗೆ ಮೌಲ್ಯಮಾಪನ ಕಾರ್ಯಕ್ಕಾಗಿ ಆದೇಶಗಳನ್ನು ಮಂಡಳಿಯಿಂದ ಪರಿಶೀಲಿಸಿ ಹೊರಡಿಸಲಾಗುವುದು.
- ಶಿಕ್ಷಕರ ಮಾಹಿತಿಗಳನ್ನು ಅಪ್ ಡೇಟ್ ಮಾಡಲು, ಸೇರ್ಪಡೆ ಮಾಡಲು ಹಾಗೂ ಡಿಲೀಟ್ ಮಾಡಲು ಅವಕಾಶ ನೀಡಲಾಗಿದೆ. ಡಿಲೀಟ್ ಮಾಡುವ ಮುನ್ನ ಕಾರಣಗಳನ್ನು ನಮೂದಿಸುವುದು.

ಈ ನಮೂನೆಯಲ್ಲಿ ಶಿಕ್ಷಕರ ಮಾಹಿತಿಗಳನ್ನು ಭರ್ತಿ ಮಾಡದ ಶಾಲೆಗಳ ಅಂತಿಮ ಪರೀಕ್ಷೆಯ ಪ್ರವೇಶಪತ್ರಗಳನ್ನು ತಡೆಹಿಡಿಯಲಾಗುವುದು.

(ಸುಮಂಗಲ. ವಿ) 3/12/18

ನಿರ್ದೇಶಕರು, ಪರೀಕ್ಷೆಗಳು

ಗೆ,

ರಾಜ್ಯ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ